15 ನೇ ಅಪರ ಲಘು ವ್ಯವಹಾರಗಳ ನ್ಯಾಯಾಲಯ, ಮೆಯೋಹಾಲ್ ವಿಭಾಗ, ಬೆಂಗಳೂರು

(ಎಸ್.ಸಿ.ಸಿ.ಎಚ್-19)

ಎಂವಿಸಿ ಸಂಖ್ಯೆಃ4372ಃ 2018

ಆರ್‌ಡಬ್ಲೂ-1

ದಿನಾಂಕಃ01.02.2019 ರಂದು ಪ್ರಮಾಣಿಕರಿಸಲಾಯಿತು.

| | |
|---|---|
| ಹೆಸರುಃ | ಲಕ್ಷ್ಮಣ್‌ಮೂರ್ತಿ |
| ತಂದೆಯ ಹೆಸರುಃ | ಚಂದ್ರನಾಯ್ಕ್ |
| ವಯಸ್ಸುಃ | 43 ವರ್ಷ |
| ವೃತ್ತಿಃ | ಚಾಲಕ |
| ವಾಸಃ | ಬೆಂಗಳೂರು. |

ಮುಖ್ಯ ವಿಚಾರಣೆಃ ಶ್ರೀ.ಆರ್‌ಎಸ್‌ಎಸ್‌ಆರ್ ವಕೀಲರಿಂದ ಒಂದನೇ ಎದುರುದಾರರ ಪರವಾಗಿ.

ದಿಃ11.07.2018ರಂದು ಲಾರಿ ನಂಬರುಃಒಆರ್ಃ11ಃಕೆಃ9347 ವಾಹನವನ್ನು ನಾನು ಚಲಾಯಿಸಿಕೊಂಡು ನರಸಾಪುರದಿಂದ ನೆಲಮಂಗಲಕ್ಕೆ ಹೊಗುತ್ತಿದ್ದೆನು. ನಾನು ಆವಲಹಳ್ಳಿಯ ಹತ್ತಿರ ಪ್ಲೋಓವರ್ ಹತ್ತುತ್ತಿರುವಾಗ ನನ್ನ ಲಾರಿಯ ಒಳಗಡೆ ಅಳವಡಿಸಲಾಗಿದ್ದ ವೈರ್ ಬರ್ಸ್ಟ್ ಆಗಿ ಬೆಂಕಿ ಹತ್ತಿಕೊಂಡಿದ್ದರಿಂದ ನಾನು ಲಾರಿಯನ್ನು ರಸ್ತೆಯ ಎಡಬದಿಯಲ್ಲಿ ತಂದು ನಿಲ್ಲಿದ್ದೆನು. ನಾನು ಲಾರಿಯಲ್ಲಿ ನಿಲ್ಲಿಸಿದ ನಂತರ ಇಳಿದುಹೋಗಿ ಸೊಪ್ಪನ್ನು ಕಿತ್ತುಕೊಂಡು ತಂದು ಲಾರಿಯ ಹಿಂಬದಿಯ ಎರಡು ಬದಿಯಲ್ಲಿ ಹಿಂದಿನಿಂದ ಬರುವ ವಾಹನಗಳಿಗೆ ಕಾಣುವಂತೆ ಸಿಕ್ಕಿಸಿದೆನು. ಆದಾದ ನಂತರ ಹೈವೇ ಗಸ್ತುದಾರರು ಬಂದು ನನ್ನ ವಾಹನದ ಸುತ್ತಲೂ ಕೆಂಪುಪಟ್ಟಿಯನ್ನು ನಿಲ್ಲಿಸಿರುತ್ತಾರೆ. ಆ ರೀತಿ ಹಾಕಿದ ನಂತರ ನಾವು ಮೆಕಾನಿಕ್‌ರವನ್ನು ಕೆರದುಕೊಂಡು ಬರಲು ಹೋಗಿ ಬರುತ್ತಿರುವಾಗ ದ್ವಿಚಕ್ರ ವಾಹನದ ಸವಾರರು ವೇಗವಾಗಿ ಬಂದು ವಾಹನವನ್ನು ಚಲಾಯಿಸಿಕೊಂಡು ನಮ್ಮ ಲಾರಿಯ ಹಿಂಬದಿಯಲ್ಲಿ ಡಿಕ್ಕಿಹೊಡೆದು ಬಿದ್ದಿರುತ್ತಾರೆ. ಆ ಅಪಘಾತದಲ್ಲಿ ನನ್ನ ತಪ್ಪು ಏನು ಇರುವುದಿಲ್ಲ, ನನ್ನ

ಚಾಲನಾ ಪರವಾನಿಗೆಯ ನೋಟರೀಕೃತ ಪ್ರತಿಯನ್ನು ಹಾಜರುಪಡಿಸಿರುತ್ತೇನೆ ಅದನ್ನು ಮೂಲ ದಾಖಲೆಯೊಂದಿಗೆ ತಾಳೆ ಮಾಡಿ ದನ್ನು ನಿಆರ್-1 ಎಂದು ಗುರುತಿಸಲಾಯಿತು.

ಪಾಟೀಸವಾಲುಃಶ್ರೀ.ಬಿವೈಆರ್ ವಕೀಲರಿಂದ ಅರ್ಜಿದಾರರ ಪರವಾಗಿ.

ಅಪಘಾತವಾದ ನಂತರ ಪೋಲೀಸಿನವರು ಬಂದು ನಮ್ಮ ಲಾರಿಯನುನ ಅಮಾನತುಪಡಿಸಿಕೊಂಡಿರುತ್ತಾರೆ ಎಂದರೆ ಸರಿ. ಅಮಾನತುಪಡಿಸಿಕೊಂಡ ನಂತರ ಮೋಟರ್ ವಾನ ನಿರೀಕ್ಷಕರು ಎರಡು ವಾಹನಗಳ ತಪಾಸಣೆ ಮಾಡಿರುತ್ತಾರೆ ಎಂದರೆ ಸರಿ. ಮೊಟರ್ ವಾಹನ ನಿರೀಕ್ಕೆರು ಕೊಟ್ಟಿರುವಂತಹ ತಪಾಸಣಾ ವರದಿಯಲ್ಲಿ ನಮ್ಮ ಲಾರಿಗೆ ಯಾಂತ್ರಿಕ ದೋಷ ಇತ್ತು ಎನ್ನುವ ಕುರಿತಂತೆ ಯಾವುದೇ ವರದಿಯನ್ನು ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಅಪಘಾತವು ರಾಷ್ಟ್ರೀಯ ಹೆದ್ದಾರಿ-75ರ ಪ್ಲೇಓವರ್ ರಸ್ತೆಯ ಮೇಲೆ ಆಗಿರುತ್ತದೆ ಎಂದರೆ ಸರಿ. ರಾಷ್ಟ್ರೀಯ ಹೆದ್ದಾರಿಯ ಮೇಲೆ ಯಾವುದೇ ವಾಹನ ನಿಲುಗಡೆ ಇರುವುದಿಲ್ಲ ಎಂದರೆ ಸರಿ. ಸಾಕ್ಷಿ ಸ್ವತಃ ವಾಹನ ಕೆಟ್ಟಿದ್ದರಿಂದ ತಾನು ನಿಲ್ಲಿಸಿದ್ದೆನು ಎಂದು ನುಡಿದಿರುತ್ತಾರೆ. ರಾಷ್ಟ್ರೀಯ ಹೆದ್ದಾರಿಯಲ್ಲಿ ವಾಹನವು ಕೆಟ್ಟು ನಿಂತಾಗ ಆ ಕುರಿತರೆ ಹೆದ್ದಾರಿ ಗಸ್ತುದಾರರಿಗೆ ಮಾಹಿತಿ ಕೊಡಬೇಕಾಗುತ್ತದೆ ಎಂದರೆ ಸರಿ. ಆ ರೀತಿ ಏನಾದರೂ ಮಾಹಿತಿಯನ್ನು ಕೊಟ್ಟಿರುತ್ತೀರಾ ಎಂದರೆ ಕೊಟ್ಟಿರುವುದಿಲ್ಲ. ಸಾಕ್ಷಿ ಸ್ವತಃ ಹೆದ್ದಾರಿ ಗಸ್ತುದಾರರೇ ಲಾರಿಯ ಹತ್ತಿರ ಬಂದಿರುತ್ತಾರೆ ಎಂದು ನುಡಿದಿರುತ್ತಾರೆ. ದ್ವಿಚಕ್ರ ವಾಹನದ ಸವಾರರೇ ವೇಗವಾಗಿ ಬಂದು ನಮ್ಮ ಲಾರಿಗೆ ಡಿಕ್ಕಿಹೊಡೆದಿರುತ್ತಾರೆ ಎಂದು ನಾನು ದ್ವಿಚಕ್ರ ವಾಹನದ ಸವಾರರ ವಿರುದ್ಧ ದೂರನ್ನು ಕೊಟ್ಟಿರುವುದಿಲ್ಲ. ಅಪಘಾತ ಪ್ರಕರಣದಲ್ಲಿ ತನಿಖೆ ಪೂರ್ಣಗೊಂಡ ನಂತರ ಪೋಲೀಸ್ ಅಧಿಕಾರಗಳು ನನ್ನ ತಪ್ಪಿನಿಂದ ಅಪಘಾತ ಆಗಿರುತ್ತದೆ ಎಂದು ನನ್ನ ವಿರುದ್ಧ ದೋಷರೋಪಣ ಪಟ್ಟಿ ಸಲ್ಲಿಸಿರುತ್ತಾರೆ ಎಂದರೆ ಸುಳ್ಳು ದೋಷರೋಪಣ ಪಟ್ಟಿ ಸಲ್ಲಿಸಲಾಗಿರುತ್ತದೆ. ಸುಳ್ಳ ದೋಷರೋಪಣ ಪಟ್ಟಿ ಸಲ್ಲಿಸಿರುತ್ತಾರೆ ಎಂದು ಅದನ್ನು ಪ್ರಶ್ನೆ ಮಾಡಿರುತ್ತೀರಾ ಎಂದರೆ ಮಾಡಿರುವುದಿಲ್ಲ ಆದರೆ ಕ್ರಿಮಿನಲ್ ಪ್ರಕರಣವನ್ನು ನಡೆಸುತ್ತಿದ್ದೇನೆ. ಅಪಘಾತವಾದ ಸಮಯದಲ್ಲಿ

ನನ್ನ ಜೊತೆ ಕ್ಲೀನರ್ ಯಾರು ಇದ್ದಿರಲಿಲ್ಲ. ಅಪಘಾತವಾದ ದಿನ ನನ್ನ ಲಾರಿಯು ಕೆಟ್ಟಿರಲಿಲ್ಲ ನಾನೇ ಅಜಾಗರೂಕತೆಯಿಂದ ಲಾರಿಯನ್ನು ರಸ್ತೆಯ ಮದ್ಯೆ ನಿಲುಗಡೆ ಮಾಡಿ ಹೋಗಿದ್ದೆನು ಹಾಗೂ ನನ್ನ ತಪ್ಪಿನಿಂದ ಅಪಘಾತವಾಗಿರುತ್ತದೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಒ ಹೇ ಕೇ ಸ ಇದೆ

15ನೇ ಅಪರ ನ್ಯಾಯಾಧೀಶರು.

ಬೆಂಗಳೂರು.